ಶ್ರೀ ಎಸ್. ಆರ್. ಬೊಪ್ಪಾಯಿ.—ನನ್ನ ಮುಂದಿನ ಟರ್ನ್‌ನಲ್ಲಿ ಅದನ್ನು ಸೇರಿಸಿ ಎಂದು ಕೋರುತ್ತೇನೆ.

ಅಧ್ಯಕ್ಷರು.—ಆಯಿತು.

ಶಹಾಪುರಕೆ ೩೦ ಹಾಸಿಗೆಗಳ ಆಸ್ಪತ್ರೆ

೧೯೬ (೪೧೧) **ಶ್ರೀ ಶಿವಶೇಖರ ಗೌಡ ಶಿರವಾಳ (ಶಹಾಪುರ).**—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೩–೮೪ ರಲ್ಲಿ ೩೦ ಹಾಸಿಗೆಗಳಿಂದ ಕೂಡಿದ ಆಸ್ಪತ್ರೆಯೊಂದನ್ನು ಶಹಾಪುರಕ್ಕೆ ಮಂಜೂರು ಮಾಡಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ಇದುವರೆವಿಗೂ ಆಸ್ಪತ್ರೆಯನ್ನು ಪ್ರಾರಂಭಿಸದಿರುವುದಕ್ಕೆ ಕಾರಣವೇನು ? ಹಾಗೂ ಎಂದು ಪ್ರಾರಂಭಿಸಲಾಗುವುದು ?

ಶ್ರೀ ಜೆ. ಎಸ್. ದೇಶಮುಖ್ (ಆರೋಗ್ಯ ಸಚಿವರು).—

ಅ) —ಇಲ್ಲಾ—

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ವೀರಯ್ಯಸ್ವಾಮಿ (ಶ್ರೀ ಶಿವಶೇಖರ ಗೌಡರ ಪರವಾಗಿ). ಅಧ್ಯಕ್ಷರೇ, ಹೋದವರ್ಷ ಇದೇ ಪ್ರಶ್ನೆಯನ್ನು ನಾನೇ ಕೇಳಿದ್ದೇ, ಆ ಸಂದರ್ಭದಲ್ಲಿ ಈ ವರ್ಷದ ಬಜೆಟ್‌ನಲ್ಲಿ ಅದನ್ನು ಸೇರಿಸುತ್ತೇವೆಂದಿದ್ದರು. ಆದರೆ ಸೇರಿಸಿಲ್ಲ. ಸುಮಾರು ೩೦ ಸಾವಿರ ಜನಸಂಖ್ಯೆ ಇರುವ ಪಟ್ಟಣ ಶಹಾಪುರ. ಇಡೀ ತಾಲ್ಲೂಕಿನಲ್ಲಿ ಬೇರೆಲ್ಲೂ ದೊಡ್ಡ ಆಸ್ಪತ್ರೆ ಇಲ್ಲ. ಆದ್ದರಿಂದ ಬಹಳ ಆಗತ್ಯತೆ ಇದೆ. ಈ ಸಲ ಅದ್ಯತೆ ಮೇಲೆ ಮಂಜೂರು ಮಾಡಿ ಆಸ್ಪತ್ರೆ ಕಟ್ಟಡ ಕಟ್ಟಿಸಿಕೊಡುತ್ತೇವೆ ಎಂದು ಸರ್ಕಾರ ಭರವಸೆ ಕೊಡಲು ಒತ್ತಾಯಿಸುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್.—ಅಲ್ಲಿ ಹಾಲಿ ಇರುವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕಾದರೆ ೩೫ ಲಕ್ಷ ಬೇಕಾಗುತ್ತದೆ. ಅದಕ್ಕೆ ತಗಲುವ ಈ ವೆಚ್ಚವನ್ನು ಭರಿಸಲು ಜಿಲ್ಲಾಪರಿಷತ್ ಸಾಕಷ್ಟು ಹಣವನ್ನು ಒದಗಿಸಿದ ನಂತರ ಅನುಮೋದನೆಯೊಂದಿಗೆ ಪ್ರಸ್ತಾವನೆಯನ್ನು ಕಳುಹಿಸಿ ಸರ್ಕಾರ ಕ್ರಮ ತೆಗೆದುಕೊಳ್ಳುವುದು.

ಶ್ರೀ ಎಂ. ವೀರಯ್ಯಸ್ವಾಮಿ.—ಅಲ್ಲಿ ಸಿಬ್ಬಂದಿ ಸಂಬಳಕ್ಕೇ ಹಣವಿಲ್ಲ. ಇನ್ನು ಆಸ್ಪತ್ರೆ ಕಟ್ಟಲು ಹಣ ಎಲ್ಲಿಂದ ಬರುತ್ತದೆ ?

ರಾಮನಗರದಲ್ಲಿ ಅರಣ್ಯಕ ಠಾಣೆ

೧೯೭ (೪೫೧) **ಶ್ರೀ ಆರ್. ವೆಂಕಟರಾಮಯ್ಯ (ಮಾಗಡಿ).** ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಮನಗರ ಟೌನ್ ಪೊಲೀಸ್ ಠಾಣೆ ಮತ್ತು ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಪೊಲೀಸ್ ಸಿಬ್ಬಂದಿಯಾದ ಪೊಲೀಸ್ ಕಾನ್ಸ್‌ಟೇಬಲ್ ಮತ್ತು ಹೆಡ್ ಕಾನ್ಸ್‌ಟೇಬಲ್ ರವರು ಸುಮಾರು ೧೦–೧೫ ವರ್ಷಗಳಿಂದಲೂ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?